**<u>ಸಾಕ್ಷಿಯನ್ನು ದಿನಾಂಕ 30.08.2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಬಿ.ಆರ್.ಎಸ್ ವಕೀಲರಿಂದಃ</u>**

ನಾರಾಯಣಸ್ವಾಮಿ ರವರಿಗೆ ಬಚ್ಚರೆಡ್ಡಿ ರವರು ಅಣ್ಣ ಆಗಬೇಕು. 15 ಐಟಂಗಳಿಗೆ ಸಂಬಂಧಪಟ್ಟಂತೆ ನಾನು ಕೇಸನ್ನು ಹಾಕಿದ್ದೇನೆ. ಸದರಿ 15 ಐಟಂ ಆಸ್ತಿಗಳು ಬಿಟ್ಟರೇ ನಮ್ಮ ತಾತನಿಗೆ ಬೇರೆ ಯಾವುದೇ ಪಿತ್ರಾರ್ಜಿತ ಆಸ್ತಿಗಳು ಇರಲಿಲ್ಲ. ಬಚ್ಚರೆಡ್ಡಿ ರವರ ಮಗ 2ನೇ ಪ್ರತಿವಾದಿ ಎಂದರೆ ಸರಿ. ನಾರಾಯಣಸ್ವಾಮಿ ಮತ್ತು ಬಚ್ಚರೆಡ್ಡಿ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ. ಸಾಕ್ಷಿ ಮತ್ತೇ ನುಡಿಯುತ್ತಾರೆ ವಿಭಾಗ ಆಗಿಲ್ಲ. ಬಚ್ಚರೆಡ್ಡಿಯವರಿಗೆ ಅವರ ತಂದೆಯ ಪಿತ್ರಾರ್ಜಿತ ಆಸ್ತಿಯಲ್ಲಿ ದಾವಾ 15 ಐಟಂಗಳು ಬಂದಿದ್ದು ಆ ಪೈಕಿ 2 ಐಟಂಗಳನ್ನು ನಾವು ಖರೀದಿ ಮಾಡಿದ್ದೇವೆ. ನಾವು ಖರೀದಿ ಮಾಡಿದ್ದೇವೆ ಎಂದು ಹೇಳುತ್ತಿರುವ 2 ಐಟಂಗಳಲ್ಲಿ ಬಚ್ಚರೆಡ್ಡಿ ರವರಿಗೆ ಭಾಗ ಬರುವುದಿಲ್ಲ. ಸದರಿ 2 ಐಟಂಗಳನ್ನು ದಾವೆಯಲ್ಲಿ ಸೇರಿಸಿಲ್ಲ. ಬಚ್ಚರೆಡ್ಡಿಯವರಿಗೆ ದಾವಾ 15 ಐಟಂಗಳು ಭಾಗ ಬಂದಿರುವ ಬಗ್ಗೆ ಲಿಖಿತ ದಾಖಲೆ ಇದೆ. ಸದರಿ ಲಿಖಿತ ದಾಖಲೆ ಪೌತಿವಾರಸು ಖಾತೆಯಾಗಿದೆ. ದಾವಾ 15 ಐಟಂಗಳಲ್ಲಿ ಬಚ್ಚರೆಡ್ಡಿಯವರಿಗೆ ಎಷ್ಟು ಅಂಶ ಭಾಗ ಬಂದಿದೆ ಎಂದರೆ, ಅರ್ಧ ಭಾಗ ಹೋಗಿದೆ ಆ ಪೈಕಿ 3 ಐಟಂಗಳಲ್ಲಿ ಇನ್ನೂ ಜಂಟಿ ಸ್ವಾಧೀನದಲ್ಲಿದೆ.

ಬಸವಹಳ್ಳಿಯ 2 ಜಮೀನುಗಳು ಮತ್ತು ಚಿಂತಾಮಣಿಯ ಮನೆಯಲ್ಲಿ ಇನ್ನೂ ಜಂಟಿ ಸ್ವಾಧೀನದಲ್ಲಿದೆ. ಸದರಿ 3 ಐಟಂಗಳಲ್ಲಿ ಬಚ್ಚರೆಡ್ಡಿಯವರಿಗೂ ಅರ್ಧ ಭಾಗ ಇದೆ. ನಾರಾಯಣಸ್ವಾಮಿ ಮತ್ತು ಬಚ್ಚರೆಡ್ಡಿ ರವರಿಗೆ ಭಾಗ ಆಗಿರುವ ಬಗ್ಗೆ ಪೌತಿವಾರಸು ದಾಖಲಾತಿ ಇದ್ದು. ಸದರಿ ಪೌತಿವಾರಸು ದಾಖಲಾತಿ ಮಾಡಲು 1 ಮತ್ತು 2ನೇ ಪ್ರತಿವಾದಿಯವರು ಅರ್ಜಿ ಕೊಟ್ಟಿದ್ದಾರೆ.

**ಪಾಟೀ ಸವಾಲುಃ ಶ್ರೀ. ಬಿ.ಆರ್.ಎಸ್ ವಕೀಲರಿಂದಃ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**ಮರುವಿಚಾರಣೆ ಇಲ್ಲಃ**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.